ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 13-20
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಅಸ್ಪೃಶ್ಯರ ಮಹರ್ಷಿ–ಕುದ್ಮುಲ್ ರಂಗರಾಯರು

**ಡಾ. ಸಬಿತಾ ಕೊರಗ**
ಸಹಾಯಕ ಪ್ರಾಧ್ಯಾಪಕರು, ಸಮಾಜ ಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ

**Abstract:**
*ಜಾತಿ ವ್ಯವಸ್ಥೆಯ ಸಮಾಜದಲ್ಲಿ ಮೇಲ್ಜಾತಿಯೆನಿಸಿರುವ ಸಾರಸ್ವತ ಬ್ರಾಹ್ಮಣ ಜಾತಿಯಲ್ಲಿ ಜನಿಸಿದ ಕುದ್ಮುಲ್ ರಂಗರಾಯರು ನೀಲೇಶ್ವರದಿಂದ ಬೈಂದೂರಿನವರೆಗಿನ ದಕ್ಷಿಣ ಕನ್ನಡ ಜಿಲ್ಲೆಗೆ ಅಪೂರ್ವವಾಗಿರುವ ಅವಿಸ್ಮರಣೀಯ ಅಜ್ಞಾತ (!) ಮಹನೀಯ, ಅಲ್ಲಿನ ಅಸ್ಪೃಶ್ಯರ ಪಾಲಿಗೆ ಮಹರ್ಷಿ, ಹದಿನೆಂಟನೆಯ ಶತಮಾನದಲ್ಲಿ ಈ ಪ್ರದೇಶಕ್ಕೆ ಅದ್ಭುತವೆನೆಸಿದ್ದ ಕ್ರಾಂತಿಕಾರಿ ಸಾಮಾಜಿಕ ಪರಿವರ್ತನಾ ಪ್ರವರ್ತಕ. ಪಂಚಮರೆನಿಸಿ, ವಿವಿಧ ಜಾತಿ ಕಟ್ಟಳೆಗಳ ಸಂಕಲೆಯಲ್ಲಿ ಬಂದಿಸಲ್ಪಟ್ಟಿದ್ದ ಅಸ್ಪೃಶ್ಯರನ್ನು ಮನುಷ್ಯರ ಪಾಲಿಗೆ ಸೇರಿಸಲು ತನು ಮನ ಧನವನ್ನು ಧಾರೆಯೆರೆದ ಅಪ್ರತಿಮ ತ್ಯಾಗ ಮೂರ್ತಿ ಅಪ್ಪಟ ಮಹಾತ್ಮ ಕುದ್ಮುಲ್ ರಂಗರಾಯರು.*

**Keywords:** *ಅಸ್ಪೃಶ್ಯತೆ, ಪಂಚಮರು, ಕುದ್ಮುಲ್ ರಂಗರಾಯರು.*

## ಪೀಠಿಕೆ

ಪ್ರಸ್ತುತ ಕೇರಳದ ಕಾಸರಗೋಡಿನ "ಕುದ್ಮುಲ್"ಎನ್ನುವ ಚಿಕ್ಕ ಹಳ್ಳಿ ರಂಗರಾಯರ ಹುಟ್ಟೂರು. ಅಲ್ಲಿನ ಓರ್ವ ಮುಸ್ಲಿಂ ಸಾಹುಕಾರರ ಬಂಡಸಾಲೆಯಲ್ಲಿ, ಲೆಕ್ಕ ಪತ್ರವಿಡುವ ಗುಮಾಸ್ತರಾಗಿ ದುಡಿಯುತ್ತಿದ್ದ ದೇವಪ್ಪಯ್ಯನವರು ರಂಗರಾಯರ ಜನ್ಮದಾತ. ಸಾಧ್ವಿ ಗೌರಿ ಅಮ್ಮ ಅವರ ಹೆತ್ತಬ್ಬೆ. ತಮ್ಮದೆನ್ನುವ ಆಸ್ತಿಯಿಲ್ಲದ (ಆಸ್ತಿತ್ವವಿಲ್ಲದ) ಈ ಆಸ್ತಿಕರಿಗೆ ಹುಟ್ಟಿದ ಏಳು ಮಂದಿ ಮಕ್ಕಳಲ್ಲಿ ಹಿರಿಯ ಮಗನೇ ಅಸ್ಪೃಶ್ಯರಲ್ಲಿ ಆಸ್ತಿಕ್ಯವನ್ನು ಕಂಡ ಕುದ್ಮುಲ್ ರಂಗರಾಯರು.

ಕಾಸರಗೋಡಿನಲ್ಲಿ ಪ್ರಾಥಮಿಕ ಶಾಲೆಯ ಕಲಿಕೆಯನ್ನು ಮುಗಿಸುವ ಹೊತ್ತಿಗೆ ರಂಗರಾಯರು ತಮ್ಮ ತಂದೆಯನ್ನು ಕಳಕೊಂಡರು. ಮನೆತನವು ಗೌರವಾನ್ವಿತವಾಗಿತ್ತು; ಜೊತೆಗೆ ಬಡತನವೂ ಮನೆ ಮಾಡಿತ್ತು. ವಿದ್ಯಾಭ್ಯಾಸವನ್ನು ನಿಲ್ಲಿಸಿ, ಉದ್ಯೋಗವನ್ನರಸುವುದು ಅನಿವಾರ್ಯವಾಗಿತ್ತು. ಅದಕ್ಕಾಗಿ ಹುಟ್ಟಿದೂರನ್ನು ಬಿಟ್ಟು ಮಂಗಳೂರನ್ನು ಸೇರಿದರು. ಅಲ್ಲೊಂದು ಹುಲ್ಲು ಛಾವಣಿಯ ಚಿಕ್ಕ ಮನೆಯನ್ನು ಬಾಡಿಗೆಗೆ ಹೊಂದಿಸಿಕೊಂಡರು. ಸಾತ್ವಿಕತೆ ಸೌಜನ್ಯಗಳು ಮೂರ್ತಿವೆತ್ತಂತಿದ್ದ ಅವರ ವ್ಯಕ್ತಿತ್ವಕ್ಕೆ ಅಧ್ಯಾಪಕ ವೃತ್ತಿಯೊಂದು ಅನಾಯಾಸವಾಗಿ ಲಭಿಸಿತು. ಅದಕ್ಕೆ ಮಾಸಿಕ ವೇತನ ರೂಪಾಯಿ ಎಂಟು ಮಾತ್ರ. ಬಡತನದ ಒಡನಾಡಿಯಾಗಿದ್ದ ಕಾರಣ ನೆರೆಹೊರೆಯ ಕಷ್ಟಕಾರ್ಪಣ್ಯಗಳಿಗೆ ಸಹಜವಾಗಿಯೇ ತಮ್ಮನ್ನು ತೊಡಗಿಸಿಕೊಂಡು ನಿಜಗುರುವೆನಿಸಿಕೊಂಡರು. ಆ ಕಾಲದಲ್ಲಿ ಸರಕಾರವು ಕಲ್ಪಿಸಿದ್ದ ಅವಕಾಶದಂತೆ ಖಾಸಗಿಯಾಗಿ ಮೆಟ್ರಿಕ್ಯೂಲೇಶನ್ ಪಾಸ್ ಮಾಡಿಕೊಂಡರು. ತದನಂತರ ಪ್ಲೀಡರ್ ಶಿಪ್ (Pleadership) ವಕಾಲತ್ ಪರೀಕ್ಷೆಗೆ ಕುಳಿತರು. ಅದರಲ್ಲೂ ಉನ್ನತ

**Please cite this article as:** ಸಬಿತಾ ಕೊರಗ. (2025). ಅಸ್ಪೃಶ್ಯರ ಮಹರ್ಷಿ–ಕುದ್ಮುಲ್ ರಂಗರಾಯರು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(4), 13–20

ಶ್ರೇಣಿ ಪಡೆದು ಉತ್ತೀರ್ಣರಾದರು. ನಂತರ ಶೀಘ್ರದಲ್ಲಿಯೇ ಅಧ್ಯಾಪಕ ವೃತ್ತಿಯನ್ನು ಕೈಬಿಟ್ಟು ಮಂಗಳೂರಿನ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ವಕಾಲತು ವೃತ್ತಿಯನ್ನು ಕೈಗೊಂಡರು. ನಿಜಾರ್ಥದಲ್ಲಿ ಧಾರ್ಮಿಕ ಮನೋವೃತ್ತಿ ಮೃದು ನುಡಿ ವಿಚಾರಶೀಲ ನಡವಳಿಕೆಗಳಿಂದ ಅನ್ವರ್ಥವಾಗಿ ಬಡವರ ವಕೀಲರಾದರು.

ಜನ್ಮತಃ ಬ್ರಾಹ್ಮಣನಾಗಿದ್ದರೂ ಸಮಾಜದಲ್ಲಿ ಪ್ರಚಲಿತವಿದ್ದ ಜಾತೀಯತೆ (ಮೇಲು–ಕೀಳು), ಮಡಿ ಮೈಲಿಗೆ, ಅಸ್ಪೃಶ್ಯತೆಗಳ ಬಗ್ಗೆ ತೀರಾ ಅಸಮಾಧಾನಗೊಂಡಿದ್ದರು. ತಾವು ಅಧ್ಯಾಪಕ ವೃತ್ತಿಯಲ್ಲಿದ್ದಾಗ ಮಂಗಳೂರಿನಲ್ಲಿ ಬ್ರಹ್ಮಸಮಾಜ ಶಾಖೆಯ ಸ್ಥಾಪನೆಗೆ ಕಾರಣರಾದ ಉಳ್ಳಾಲ ರಘುನಾಥಯ್ಯನವರ ಸಂಪರ್ಕವಾಯಿತು. ಅಸ್ಪೃಶ್ಯರನ್ನು ಅಮಾನವೀಯತೆಗೊಳಪಡಿಸಿರುವ ಸಾಮಾಜಿಕ ಅಂಧಶ್ರದ್ಧೆ, ಕಂದಾಚಾರಗಳಿಂದ ಮನನೊಂದಿದ್ದ ರಾಯರು, ರಘುನಾಥಯ್ಯನವರಿಂದ ಪ್ರಭಾವಿತರಾದರು. ಸಮಾನತೆಯನ್ನು ಸಾರುವ ಬ್ರಹ್ಮಸಮಾಜದ ಕ್ರೀಯಾಶೀಲ ಕಾರ್ಯಕರ್ತರಾದರು. ಸಮಾಜವು ಅಸ್ಪೃಶ್ಯರನ್ನು ಪ್ರಾಣಿಗಿಂತ ಹೀನಾಯವಾಗಿ ಕಾಣುತ್ತಿರುವುದನ್ನು ಮನಗಂಡು ಅದರ ಬದಲಾವಣೆಯ ಸಾಧನೆಗೆ ತಮ್ಮನ್ನು ತಾವೇ ತೊಡಗಿಸಿಕೊಂಡರು. ಬ್ರಹ್ಮ ಸಮಾಜದ ಗಣ್ಯರ ಮತ್ತು ಆ ಸಂಸ್ಥೆಯಿಂದಲೇ ಸ್ಥಾಪಿಸಲ್ಪಟ್ಟಿದ್ದ ಥಿಯೋಸಾಫಿಕಲ್ ಸೊಸೈಟಿಯ ಸದಸ್ಯರ ಹಾಗೂ ಆಗ (1870 ನೆಯ ಇಸವಿಯಲ್ಲಿ) ಉನ್ನತ ಸರಕಾರಿ ಹುದ್ದೆಯಲ್ಲಿದ್ದ ಸಹೃದಯಿ ವಿಚಾರಶೀಲ ಆಂಗ್ಲ ದೊರೆಗಳ ಸಹಕಾರ ದೇಣಿಗೆಗಳಿಂದ ಡಿ.ಸಿ.ಎಂ. (Depressed Classes Mission) ನ್ನು ಸ್ಥಾಪಿಸಿದರು. ಬ್ರಹ್ಮ ಸಮಾಜವು ಸ್ಥಾಪಿಸಿದ್ದ ಪಂಚಮರ ಪಾಠಶಾಲೆಯನ್ನು ಮುಂದುವರೆಸುವುದು ಕಷ್ಟ ಸಾಧ್ಯವೆಂದು ಕಂಡು ಬಂದಾಗ, ನಗರದಲ್ಲಿ ಪ್ರವರ್ಧಮಾನ ಸ್ಥಿತಿಯಲ್ಲಿದ್ದ ಆರ್ಯ ಸಮಾಜದ ಕೆಲಮಂದಿ ಮಹನೀಯರ ಮತ್ತು ಪ್ರತಿಷ್ಠಿತ ಉದಾರಿಗಳ ನೆರವಿನಿಂದ ಮಂಗಳೂರಿನ ಕೊಡಿಯಾಲ್ ಬೈಲ್‌ನಲ್ಲಿ ಸ್ವಂತ ಜಾಗವನ್ನು ಪಡೆದು ಡಿ.ಸಿ.ಎಂ. ಸಂಸ್ಥೆಯ ಹೆಸರಿನಲ್ಲಿಯೇ ಅಸ್ಪೃಶ್ಯರಿಗಾಗಿಯೇ ಒಂದು ಪ್ರಾಥಮಿಕ ಶಾಲೆಯನ್ನು ಮತ್ತೊಂದು ವೃತ್ತಿಪರ ಶಾಲೆ (ಕೈ ಮಗ್ಗದ ಶಾಲೆ ಬಡಗಿ ಕೆಲಸ) ಯನ್ನು ಆರಂಬಿಸಿ, ಅಸ್ಪೃಶ್ಯರ ನಿಯಮ ಬದ್ಧ ಶಿಕ್ಷಣಕ್ಕೆ (Formal Education) ಆದ್ಯರಾದರು. ಇವುಗಳ ಜೊತೆಗೆ ಅಸ್ಪೃಶ್ಯ ಹೆಣ್ಣು ಮಕ್ಕಳ ಸಲುವಾಗಿ ವಿದ್ಯಾರ್ಥಿನಿಯರ ವಸತಿ ನಿಲಯವನ್ನು ಸ್ಥಾಪಿಸಿದರು. (ಕರ್ನಾಟಕ ಸರಕಾರವು ಇತ್ತೀಚೆಗೆ ಅವೆಲ್ಲವನ್ನು ಮನ್ನಾ ಮಾಡಿ ರಾಯರ ಹೆಸರಿನಲ್ಲಿ ಒಂದು ಮಹಡಿಯ ಸಾರ್ವಜನಿಕ ವಿದ್ಯಾರ್ಥಿನಿಯರ ವಸತಿ ನಿಲಯವನ್ನೂ ಎರಡು ಮಾಣಿಜ್ಯ ಸಂಕೀರ್ಣಗಳನ್ನು ನಿರ್ಮಿಸಿದೆ). ಆ ಕಾಲದಲ್ಲಿ ಈ ಕಾರ್ಯವೇನೇನೂ ಸರಳವಾಗಿರಲಿಲ್ಲ. ಒಂದೆಡೆಯಲ್ಲಿ ಸವರ್ಣೀಯರ ಕ್ರೋಧ, ಹಗೆತನ, ನಿಂದೆ, ಕಿರುಕುಳ ಮತ್ತೊಂದೆಡೆಯಲ್ಲಿ ಜಾತಿ ಮಕ್ಕಳು ಹಾಗೂ ತಮ್ಮ ಸ್ವಂತ ಸಂಬಂಧಿಗಳಿಂದಲೇ ತೀವ್ರ ತರದ ವಿರೋಧ, ಭರ್ತ್ಸನೆಗಳನ್ನು ಎದುರಿಸಬೇಕಾಗಿತ್ತು. ತಮ್ಮ ಕಾರ್ಯ ನಿಮಿತ್ತವಾಗಿ ಅವರು ದಾರಿಯಲ್ಲಿ ನಡೆದು ಹೋಗುತ್ತಿದ್ದರೆ ಅವರಿಗೆ ಕೇಳಿಸಲೇಂದೇ ಅಪಶಬ್ದಗಳಿಂದ ವಿಕಾರವಾಗಿ ಕೂಗಿ ಅಪಮಾನಗೊಳಿಸುತ್ತಿದ್ದರು. ಸೆಗಣಿ, ಹೊಲಸು, ತ್ಯಾಜ್ಯಗಳನ್ನು ಅವರ ಮೇಲೆ ಗುರಿಯಿಟ್ಟು ಎಸೆಯುತ್ತಿದ್ದರು ಎನ್ನುವ ಸಂಗತಿಗಳನ್ನು ಪ್ರತ್ಯಕ್ಷದರ್ಶಿಗಳು ಹೇಳಿರುವುದನ್ನು ಕೇಳಿಸಿಕೊಂಡವರು ಈಗಲೂ ಇದ್ದಾರೆ. ಜೀವ ಬೆದರಿಕೆ, ಮೋಸಗಾರಿಕೆ, ಜಾತಿ ಬಹಿಷ್ಕಾರಗಳನ್ನೂ ಅನುಭವಿಸಿದ್ದರು ಎಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಇಂತಹ ಕ್ರೂರವಾದ ಅಪಾಯಕಾರಿ ಸನ್ನಿವೇಶಗಳೂ ಎದುರಾಗಿದ್ದರೂ ತಮ್ಮ ಉದ್ದೇಶವನ್ನು ಸಾಧಿಸಿಕೊಳ್ಳುವಲ್ಲಿ ಅಚಲವಾದ ನಿಷ್ಠೆ ಮತ್ತು ಧೈರ್ಯವನ್ನು ಕಳಕೊಳ್ಳಲಿಲ್ಲ. ಅವೆಲ್ಲವನ್ನೂ ಶಾಂತ ಚಿತ್ತರಾಗಿ, ತಾಳಿ ಕ್ರೌರ್ಯ ತೋರಿದವರನ್ನು

ಮಿತ್ರರಂತೆ ಸಂಬಾಳಿಸಿಕೊಂಡು ಅಜಾತ ಶತ್ರುವೆನಿಸಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ವಿವಿಧ ಪಂಗಡಗಳಿಗೆ ಸೇರಿದ ಎಲ್ಲಾ ಅಸ್ಪೃಶ್ಯರನ್ನು ಒಟ್ಟಾಗಿ ಪಂಚಮರೆಂದು ಕರೆಯುತ್ತಿದ್ದರು. ಈ ಪಂಚಮರ ಒಂದೊಂದು ಪಂಗಡದವರೂ ತಮ್ಮದೇ ಆಗಿರುವ ವಿಶಿಷ್ಟ ಕಲೆಗಾರಿಕೆಯ ಉಡುಗೆ–ತೊಡುಗೆ ಆಭರಣಗಳನ್ನು ಧರಿಸಬೇಕಿತ್ತು. ಆಯಾ ಪಂಗಡದ ಮಹಿಳೆಯರು ಹಿತ್ತಾಳೆ, ತಾಮ್ರ, ಕಬ್ಬಿಣ ಇತ್ಯಾದಿ ಲೋಹಗಳಿಂದ ಜಾತಿ ನಿರ್ದಿಷ್ಟ ಮಾದರಿಯ ಕೈ ಬಳೆ, ಕಿವಿಯೋಲೆ, ಉಂಗುರ, ಮಣಿಸರಗಳನ್ನು ತಯಾರಿಸಿ ಧರಿಸಬೇಕಿತ್ತು. ಒಂದು ಜಾತಿಗೆ ಸೇರಿದ ಮಹಿಳೆಯರು ಅನುಸರಿಸುತ್ತಿದ್ದ ಚಿಹ್ನೆಯ ಉಡುಗೆ–ತೊಡುಗೆಯನ್ನು ಉಳಿದ ಯಾವುದೇ ಜಾತಿಯ ಮಹಿಳೆಯರು ಉಪಯೋಗಿಸುವುದು ನಿಷಿದ್ಧವಾಗಿತ್ತು. ಅದು ದಂಡನಾರ್ಹವೂ ಆಗಿತ್ತು. ಪಂಚಮರಲ್ಲಿ ಮುಂಡಾಳ, ಮೊಗೇರ, ಪರವ, ಪಂಬದ, ಪಾನರ, ಬಾಕುಡ, ಭೈರ, ಕರಾವಿ(ಕರಾಳಿ) ಇತ್ಯಾದಿ ಹಲವು ಜಾತಿಗಳಿರುವುದರಿಂದ ಅವರವರ ಉಡುಗೆ–ತೊಡುಗೆಗಳಿಂದಲೇ ಅವರ ಸಾಮಾಜಿಕ ಸ್ಥಾನಮಾನ (!) ಗಳನ್ನು ಗುರುತಿಸಲು ಅನುಕೂಲವಾಗಬೇಕೆಂದು ಮೇಲ್ವರ್ಗವ (?) ವಿಧಿಸಿದ ನಿಷೇಧವಿದು ಎನ್ನುವುದು ಕ್ರೂರವಾದ ಸತ್ಯ. ಅಷ್ಟೇ ಅಲ್ಲ ಒಂದು ಪಂಗಡದವರು ಮತ್ತೊಂದು ಪಂಗಡದವರೊಂದಿಗೆ ನಿಕಟ ಸಂಪರ್ಕವಿಟ್ಟುಕೊಳ್ಳಬಾರದಾಗಿತ್ತು. ಅವರೊಳಗೂ ಅಸ್ಪೃಶ್ಯತೆಯಿತ್ತು. ಮತ್ತೊಂದು ಭಯಾನಕ ವೈಚಿತ್ರ್ಯವೆಂದರೆ ಕೊರಗರು ಈ ಪಂಚಮರೆಲ್ಲರಿಗೂ ಅಸ್ಪೃಶ್ಯರು. ಅವರ ಪರಿಸ್ಥಿತಿ ಇನ್ನೂ ಅದೇ ಸ್ಥಿತಿಯಲ್ಲಿದೆಯೆಂದರೆ ಆಶ್ಚರ್ಯವೆನಿಸಿದರೂ ಸುಳ್ಳಲ್ಲ. ಕುದ್ಮುಲ್ ರಂಗರಾಯರು ಅವನ್ನು ಚೆನ್ನಾಗಿ ತಿಳಿದಿದ್ದರು. ಕೊರಗರು ಒಗ್ಗಿಸಿಕೊಳ್ಳಬೇಕಾಗಿದ್ದ ಅನಾಗರಿಕ ವರ್ತನೆ ಸಾಂಪ್ರದಾಯಿಕತೆಯ ಚಟವಾಗಿ ಅವರಲ್ಲಿ, ಬೇರು ಬಿಟ್ಟಿದ್ದ ಬೇಡುವ ಪ್ರವೃತ್ತಿ ಇತ್ಯಾದಿಗಳನ್ನು ಕಂಡು ನೊಂದು ಈ ದುಸ್ಥಿತಿಯಿಂದ ಅವರ ಬಿಡುಗಡೆಯಾಗಲೆಂದು ಕಡ್ಡಾಯ ಶಿಕ್ಷಣ, ಕುಲ ಕಸುಬಿಗೆ (ಬುಟ್ಟಿ ಹೆಣಿಕೆ, ತೆಂಗಿನ ನಾರಿನಿಂದ ಹಗ್ಗ ಹೊಸೆಯುವುದು ಇತ್ಯಾದಿ), ವೃತ್ತಿಪರ ಶಿಕ್ಷಣದ ಸ್ಪರ್ಶ ಮುಂತಾದವುಗಳನ್ನು ಅಳವಡಿಸಿದರು. ಅವರಿಗೆಂದೇ ಪ್ರತ್ಯೇಕ ಜಮೀನು ವಿತರಣೆ ಮಾಡುವಂತೆ ಸರಕಾರವನ್ನು ಆಗ್ರಹ ಪಡಿಸಿರುವರೆಂಬುದಕ್ಕೆ ದಾಖಲೆಯಿದೆ.

ಈ ಜಿಲ್ಲೆಯಾದ್ಯಂತ ದಮಿತ ಅಸ್ಪೃಶ್ಯ ವರ್ಗವೆಲ್ಲಿದೆಯೋ ಅಲ್ಲೆಲ್ಲ ಕುದ್ಮುಲ್ ರಂಗರಾಯರು ಪಾದಾರ್ಪಣೆಗೈದಿದ್ದಾರೆ. ಶ್ರೇಣಿಕೃತ ಜಾತಿ ವ್ಯವಸ್ಥೆಯ ಸಮಾಜದಲ್ಲಿ ಶತಶತಮಾನಗಳಿಂದ ಮಾನವರೆಂಬುದನ್ನು ಮರೆತು, ತಾವು ಹೀಗೆಯೇ ಇರಬೇಕಾದವರೆಂದು ದೇವರು ಉಂಟು ಮಾಡಿದ್ದಾನೆನ್ನುವ ನಂಬಿಕೆಯ ಸಂಪ್ರದಾಯಕ್ಕೆ ಕಟ್ಟು ಬಿದ್ದು ಅದನ್ನೇ ಮೈಗೂಡಿಸಿಕೊಂಡಿರುವ ವಿಭಿನ್ನ ಪಂಗಡಗಳನ್ನು ಮನುಷ್ಯ ವರ್ಗಕ್ಕೆ ಸೇರಿಸಲು ಅವರು ನಡೆಸಿದ ಪ್ರಯೋಗಗಳು ನಿರೀಕ್ಷಿತ ಫಲವನ್ನೀಯದಿದ್ದರೂ ಅದೊಂದು ಆ ಮುಂದಿನ (ಇಂದಿನ) ಸಾಮಾಜಿಕ (ಸಮಾಜಶಾಸ್ತ್ರೀಯ) ಅಧ್ಯಯನಕ್ಕೆ ಭದ್ರವಾದ ಬುನಾದಿಯಾಗಿದೆ.

ಸ್ವಂತ ಭೂಮಿಯೇ ಇಲ್ಲದಿರುವುದರಿಂದ ಈ ಅಸ್ಪೃಶ್ಯರಿಗೆ ನೆಲೆಯೇ ಇಲ್ಲ ಅದುವೇ ಇಲ್ಲದ ಮೇಲೆ ನಾಳಿನ ಚಿಂತೆಯೂ ಇಲ್ಲ. ತಮ್ಮ ಬದುಕಿನ ಭದ್ರತೆಯು ಮೇಲ್ವರ್ಗದವರ ವಶವಾದ ಮೇಲೇ ಆಶಾವಾದ ಆಲೋಚನೆಗಳು ಅವರಲ್ಲಿ ಹೊಳೆಯುವುದೆಂತು? ಎಂಬುದನ್ನು ರಾಯರು ಸಂಪೂರ್ಣವಾಗಿ ಮನಗಂಡಿದ್ದರು. ಶಿಕ್ಷಣನೊಂದಿಗೆ ತಮ್ಮದೇ ಆಗಿರುವ ಜಮೀನು ಇರಬೇಕು ಎನ್ನುವುದನ್ನು ದೃಢವಾಗಿ ನಂಬಿದ್ದರು. ಈ ಸತ್ಯವನ್ನು ಆಗಿನ ಬ್ರಿಟಿಷ್ ಸರಕಾರದ ಗಮನಕ್ಕೆ ತಂದರು. ಆಂಗ್ಲ ಜಿಲ್ಲಾಧಿಕಾರಿಯವರ ಮನವೊಲಿಸಿ ವಿಚಾರವಂತ ಗಣ್ಯರನ್ನು ಸಹ ಚಿಂತನೆಗೆ ಹಚ್ಚಿ, ಅವರ ಸಹಕಾರದಿಂದ ದಲಿತರಿಗೆ ಭೂಮಿ ವಿತರಣೆ

ಮಾಡುವ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮಂಗಳೂರು ನಗರದ ವ್ಯಾಪ್ತಿಯಲ್ಲಿ ಸೂಟರ್‌ಪೇಟೆ (ಆಗಿನ ಜಿಲ್ಲಾಧಿಕಾರಿ ಸೂಟರ್ ಎಂಬವರ ಹೆಸರನ್ನೇ ಕೊಡಲಾಗಿತ್ತು)ಯ ಸುಮಾರು 500 ಎಕರೆ, ದಡ್ಡಲ್ ಕಾಡು ಎಂಬಲ್ಲಿ ಸುಮಾರು 250 ಎಕರೆ, ಉರ್ವದ ವೆಲ್ಸ್ ಪೇಟೆ (ಆಗಿನ ಜಿಲ್ಲಾಧಿಕಾರಿ 'ವೆಲ್ಸ್' ಎನ್ನುವ ಮಹನೀಯರ ಹೆಸರಲ್ಲಿ)ಯ ಸುಮಾರು ಐದು ಎಕರೆ, ಕೋಡ್ಶೈಲ್ ಅಥವಾ ಕೋಡಿಕಲ್ ನಲ್ಲಿ 500 ಎಕರೆ, ಕಾಪಿಕಾಡು, ಸುಲ್ತಾನ್ ಬತ್ತೇರಿ, ಬೋಳೂರು, ಚಿಲಿಂಬಿಗುಡ್ಡೆ ಇತ್ಯಾದಿ ಪ್ರದೇಶಗಳು ಕುದ್ಮುಲ್ ರಂಗರಾಯರ ಹೆಸರನ್ನು ಹೇಳುತ್ತದೆ. ಇದು ಕೇವಲ ಮಂಗಳೂರು ನಗರವಷ್ಟೆ ಸೀಮಿತವಲ್ಲ. ಆಗಿನ ಸರಕಾರದಿಂದ ಬಹಳಷ್ಟು ವಿಸ್ತೀರ್ಣದ ಭೂಮಿಯನ್ನು ಜಿಲ್ಲೆಯ ಉದ್ದಗಲಕ್ಕೂ ದಲಿತರಿಗೆಂದೇ ಮಂಜೂರು ಮಂಜೂರು ಮಾಡಿಸಿದ್ದಾರೆ. ಉಳ್ಳಾಲದ ಕಾಪಿಕಾಡು, ಪಣಂಬೂರು, ಸುರತ್ಕಲ್, ಹಳೆಯಂಗಡಿ, ಮುಲ್ಕಿ, ಕಾರ್ನಾಡು, ಕೆರೆಕಾಡು, ಕಿಲ್ಪಾಡಿ, ಪಂಚಕಾರು, ಮುಳ್ಳಕಾಡು, ಉಡುಪಿ (ಈಗ ಜಿಲ್ಲೆ)ಯ ಬನ್ನಂಜೆ ಕುಂಜಬೆಟ್ಟು, ಚಿಟ್ಪಾಡಿ, ನಿಟ್ಟೂರು, ಪುತ್ತೂರು (ಈಗ ಹನುಮಂತನಗರ) ಬೆಳ್ಕಲ್, ಉದ್ಯಾವರ, ಬ್ರಹ್ಮಾವರ, ಚಾಂತಾರ್, ಚೇರ್ಕಾಡಿ, ಕುಂದಾಪುರದ ನಾವುಂದ, ಸಾಲಿಗ್ರಾಮ, ಶಂಕರನಾರಾಯಣ, ಆರ್ಡಿ, ವಂಡ್ಸೆ ಇನ್ನೂ ಅನೇಕ ಕಡೆಗಳಲ್ಲಿ ಜೀವಂತ ನಿದರ್ಶನಗಳು ಇವೆ. ಅಸ್ಪೃಶ್ಯರ ಕುರಿತು ಅವರ ಹೃದಯ ಮಿಡಿತ, ದೂರಗಾಮಿತ್ವವೇನಿತ್ತು ಎನ್ನುವುದಕ್ಕೆ ಸರಕಾರದ ಪ್ರಸ್ತುತ ಕಡತಗಳಲ್ಲಿ ಲಭ್ಯವಿರುವ ಡಿ.ಸಿ. ಜಮೀನು ಎನ್ನುವ ವ್ಯಾಖ್ಯೆಯು ಸಾಕ್ಷಿಯಾಗಿದೆ. ಇದೆಲ್ಲ ನಡೆದುದು 1870ರಷ್ಟು ಹಿಂದೆಯೆ.

ಪೂಜ್ಯ ರಂಗರಾಯರು ಸ್ಥಾಪಿಸಿದ್ದ ಪ್ರಾಥಮಿಕ ಶಾಲೆ ಹಿರಿಯ ಪ್ರಾಥಮಿಕ ಶಾಲೆ ಮತ್ತು ಆಶ್ರಮ ಶಾಲೆಗಳಲ್ಲಿ ಓದು–ಬರಹದ ಜೊತೆಗೆ ಶಿಸ್ತು, ವಿನಯ, ದೈಹಿಕ ನೈರ್ಮಲ್ಯ, ಮಾನಸಿಕ ವಿಕಸನ, ಗುಣ ನಡತೆ, ಧಾರ್ಮಿಕತೆಗಳಿಗೂ ಆದ್ಯತೆಯಿತ್ತು. ಅಸ್ಪೃಶ್ಯರಿಗೆ ನಿಷಿದ್ಧವಾಗಿದ್ದ ಗಾಯತ್ರಿ ಮಂತ್ರವನ್ನು ಮಕ್ಕಳಿಂದ ಬಾಯಿಪಾಠ ಮಾಡಿಸಿ ದಿನನಿತ್ಯ ಸಂಧ್ಯಾವಂದನೆಯನ್ನು ಮಾಡಿಸಿಯೇ ಆಯಾ ದಿನದ ಪರಿಪಾಠಗಳಿಗೆ ಹಚ್ಚುತ್ತಿದ್ದರು. ದಿನದ ಕೊನೆಯಲ್ಲಿಯೂ ಉಪನಿಷತ್ ಶ್ಲೋಕಗಳನ್ನು ಜಪಿಸಿಯೇ ರಾತ್ರಿಯ ನಿದ್ರಾ ವಿರಾಮಕ್ಕೆ ಆಸ್ಪದವಿತ್ತು.

ಮಾನವ ಜನುಮ ದೊಡ್ಡದು ಎನ್ನುವ ಮಾತಿನ ಮೂರ್ತ ಸ್ವರೂಪ ಸನ್ಮಾನ್ಯ ಕುದ್ಮುಲ್ ರಂಗರಾಯರು ಅವರೊಬ್ಬ ಅಲೌಕಿಕ ಸಹನಾಮೂರ್ತಿ. ಅದು 1892ರಲ್ಲಿ ಅಸ್ಪೃಶ್ಯರಿಗಾಗಿ ಈ ಜಿಲ್ಲೆಯಲ್ಲಿ ಪ್ರಪ್ರಥಮ ಶಾಲೆಯೊಂದನ್ನು ತೆರೆಯಲು ಅವರು ಮುಂದಾದರು. ಇದಕ್ಕೆ ಸವರ್ಣಿಯರ್ಯಾರು ತಮ್ಮ ಕಟ್ಟಡವನ್ನು ಕೊಡಲೊಪ್ಪಲಿಲ್ಲ. ಮಂಗಳೂರು ನಗರಕ್ಕೆ ತಾಗಿರುವ (ಈಗ ನಗರ ವ್ಯಾಪ್ತಿಯಲ್ಲಿದೆ) ಉರ್ವದ ಚಿಲಿಂಬಿಯಲ್ಲಿದ್ದ ರೋಮನ್ ಕೆಥೋಲಿಕ್ ಮಹಿಳೆಯೊಬ್ಬರು ತಮ್ಮ ಮನೆಯ ಒತ್ತಿಗಿರುವ ಹುಲ್ಲು ಛಾವಣಿಯ ಕೊಟ್ಟಿಗೆಯೊಂದನ್ನು ತೆರವು ಮಾಡಿದರು. ಹತ್ತು ಹದಿನೈದು ಮಂದಿಯ ಸೇರ್ಪಡೆಯೊಂದಿಗೆ ಶಾಲೆಯು ಆರಂಭವಾಯಿತು. ಸವರ್ಣಿಯರ ಕೆಂಗಣ್ಣು ಇದರ ಮೇಲೆ ಬಿತ್ತು. ಮುನಿಸಿಪಾಲಿಟಿಯ ತೋಟಿಗಳಿಂದ ನಗರದ ಹೊಲಸನ್ನು ಶಾಲೆಯೆಂದಾಗಿದ್ದ ಈ ಗುಡಿಸಲಿನೊಳಗೆ ಎರಚಾಡಿಸಿದರು. ಮಕ್ಕಳು ಶಾಲೆಗೆ ಬಾರದಂತೆ ಬೆದರಿಕೆ ಹಾಕಿದರು. (ಕಲ್ಲು ಕಟ್ಟಿಗೆ ಹಿಡಿದು ಹಿಂದಕ್ಕೆ ಅಟ್ಟಿದರು) ಗುಡಿಸಲಿನ ಯಜಮಾನ ಆ ದಿನಗಳಲ್ಲಿ ಏನನ್ನು ಮಾಡುವಂತಿರಲಿಲ್ಲ. ರಾಯರಿಗೆ ಆ ಕೊಟ್ಟಿಗೆಯನ್ನು ಬಿಡಲೇ ಬೇಕಾದ ದುಸ್ಥಿತಿಯೆದುರಾಯಿತು. ಆದರೆ ಧೃತಿಗೆಡಲಿಲ್ಲ. ವಿಳಂಬವಿಲ್ಲದೆ ನಗರದ ಹೊರವಲಯ ಕಂಕನಾಡಿಯಲ್ಲೊಂದು ಮತ್ತು ಆಗ ನಗರಕ್ಕೆ ತಾಗಿರುವ ಬೋಳೂರಲ್ಲೊಂದು ಎರಡು ಪಂಚಮರ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿದರು. ಜಾತಿಯತೆಯು ಅಲ್ಲೂ ಅವರ ಬೆನ್ನು ಬಿಡಲಿಲ್ಲ. ಅಸ್ಪೃಶ್ಯರಿಗೆ ಕಲಿಸಲು ಸವರ್ಣಿಯರು ಮುಂದೆ

ಬರಲಿಲ್ಲ. ದೂರದ ಕಿನ್ನಿಗೋಳಿ, ತಾಳಿಪಾಡಿಯ ಕ್ರೈಸ್ತ ಮತಕ್ಕೆ ಸೇರಿದ ಅಧ್ಯಾಪಕರುಗಳನ್ನು (ಛಲ ತೊಟ್ಟು) ನೇಮಿಸಿಕೊಂಡರು. ಇದನ್ನು ಸಹಿಸಲಾಗದ ಮೇಲ್ವರ್ಗದ ಮಂದಿ ಅವಾಚ್ಯ ಪದಗಳಿಂದ ನಿಂದಿಸಿದರು. ರಾಯರ ಹೆಣ್ಣು ಮಕ್ಕಳು ರಸ್ತೆಯಲ್ಲಿ ನಡೆದುಕೊಂಡು ಶಾಲೆಗೆ ಹೋಗುತ್ತಿರುವಾಗ ಅಶ್ಲೀಲ ಪದಗಳಿಂದ ಅಪಮಾನ ಮಾಡಿದರು. ಇದನ್ನು ಕಂಡು ಮಕ್ಕಳೂ ಶಾಲೆಗೆ ಹೋಗಿ ಬರಲು ಕುದುರೆ ಜಟಕಾದ ವ್ಯವಸ್ಥೆಯನ್ನು ಮಾಡಿದರೇ ಹೊರತು ಮನುಷ್ಯತ್ವವನ್ನು ಮರೆತಿದ್ದ ಮಂದಿಗೆ ರಾಯರು 'ಚ್' ಕಾರ ವೆತ್ತಲಿಲ್ಲ.

ಮೇಲ್ಜಾತಿವರೆನಿಸಿದ್ದ ಮಂದಿ ಅಸ್ಪೃಶ್ಯರ ನೆರಳು ಸೋಕಿದರೂ ಅಸ್ಪೃಶ್ಯರನ್ನು ಹಾಡು ಗಾಳಿಬೀಸಿದರೂ ಮೈಲಿಗೆಯಾಯ್ತೆಂದು ಹದಿನಾರು ಸರ್ತಿ ನೀರಲ್ಲಿ ಮುಳುಗಿ ಹಾಕುತ್ತಿದ್ದ ಅತ್ಯಂತ ಭಯಂಕರವಾದ ಮಡಿವಂತಿಕೆಯ ಕಾಲದಲ್ಲಿ ಒಬ್ಬಂಟಿಯಾಗಿ ಅಸ್ಪೃಶ್ಯರ ಸಾಮಾಜೀಕರಣಗೊಳಿಸುವ, ಸಮಾಜದಲ್ಲಿ ತ್ಯಾಜ್ಯವೆನಿಸಿದ್ದ ಬಹಿಷ್ಕೃತ ಸಮುದಾಯವನ್ನು ಉತ್ಪಾದಕ ಶಕ್ತಿಯನ್ನಾಗಿ ಪರಿವರ್ತಿಸುವ ಕಾಯಕವನ್ನು ಕೈಗೊಂಡಿದ್ದರು. ಪರಿಣಾಮವಾಗಿ ಈ ಜಿಲ್ಲೆಯ ಸವರ್ಣಿಯರೆಲ್ಲರೂ ಕುದ್ಮುಲ್ ರಂಗರಾಯರನ್ನು ಸಮಾಜದ್ರೋಹಿ, ಧರ್ಮ(!) ಕಂಟಕ ಎಂದು ಬಹಿಷ್ಕರಿಸಿದ್ದರು. ಸಾಹಿತಿ, ಪತ್ರಕರ್ತ, ದಾರ್ಶನಿಕರೆಲ್ಲ ಅವರ ಹೆಸರನ್ನೆತ್ತಿದರೆ ತಾವೂ ಕೂಡ ಬಹಿಷ್ಕೃತರಾದೇವು ಎಂದು ಹೆದರಿ – ಹೆಳವ ಕುರುಡ ಕಿವುಡರಾದರು. ಹಾಗಾಗಿ ರಂಗರಾಯರ ಕುರಿತು ಯಾರು ಏನನ್ನೂ ದಾಖಲಿಸಲಿಲ್ಲ. ಇಲ್ಲಿ ಗಮನಿಸಬಹುದಾದ ಅಂಶವೆಂದರೆ ದಮನಿತರು ಅಸ್ಪೃಶ್ಯತೆಯಿಂದ ಬಿಡುಗಡೆಗೊಂಡು ಮಾನವರಾಗುವುದು ರಾಯರಿಗೆ ತಮ್ಮ ಕರ್ತವ್ಯವಾಗಿತ್ತು. ಅದು ಅವರ ಧರ್ಮವಾಗಿತ್ತು; ದೇಶೋದ್ಧಾರವಾಗಿತ್ತು ಅದಕ್ಕೆ ಅವರು ಪ್ರಶಂಸೆ, ಪ್ರಚಾರ ಪ್ರತಿಷ್ಠೆಗಳನ್ನು ಬಯಸಿರಲಿಲ್ಲ. ಅವರಲ್ಲಿ ಅಂಧಶ್ರದ್ಧೆ, ಧರ್ಮಾಂದತೆ ಜಾತ್ಯಂಧತೆಗಳಿಗೆ ವಿರೋದವಿತ್ತು. ಹಾಗೆಂದು ಅವರಿಗೆ ಹಿತೈಷಿಗಳಿರಲಿಲ್ಲವೆಂದಿಲ್ಲ.

ಋಜು ಧರ್ಮಜ್ಞ ಶ್ರೀ ರಂಗರಾಯರು ತಮ್ಮನ್ನು ಅರ್ಪಿಸಿಕೊಂಡಿದ್ದ ನಿಸ್ವಾರ್ಥ ಸೇವೆಯನ್ನು ಕಂಡು ವಿಸ್ಮಯಪಟ್ಟಿದ್ದ ಗಣ್ಯರನೇಕರು ಸದ್ದಿಲ್ಲದೆ ಡಿ.ಸಿ.ಎಂ ಸಂಸ್ಥೆಗೆ ಆರ್ಥಿಕ ನೆರವನ್ನೀಯುತ್ತಿದ್ದರು. ಅದರಲ್ಲೂ ವಿಶೇಷವಾಗಿ ವಿದೇಶಿಯರು ಕೇವಲ ಧನ ಸಹಾಯವಲ್ಲದೆ ಅತ್ಯಮೂಲ್ಯವಾದ ಅನೇಕ ಗ್ರಂಥಗಳನ್ನು ಒದಗಿಸುತ್ತಿದ್ದರು. ಅಂಥವರಲ್ಲಿ ಅಂದಿನ ಪ್ರಖ್ಯಾತ ಕೈಗಾರಿಕೋದ್ಯಮಿ ಹೆನ್ರಿ ಫೋರ್ಡ್ ಮಹಾಶಯ ಜಸ್ಟೀಸ್ ಮಿಲ್ಟನ್ ಸೇರಿದ್ದಾರೆ. ಸ್ಥಳೀಯರಲ್ಲಿ ನೆಲ್ಲಿಕಾಯಿ ವೆಂಕಟ್ರಾಯರು, ಬೆನಗಲ್ ರಾಮರಾಯರು, ನಯಂಪಳ್ಳಿ ರಾಮರಾಯರು, ಮುಂಡಪ್ಪ ಬಂಗೇರ, ನರ್ಸಪ್ಪಯ್ಯ ಇವರೆಲ್ಲ ನಿಕಟವರ್ತಿಗಳು. ಭಾರತ ಸೇವಾ ಸಮಿತಿಯ ಸಂಸ್ಥಾಪಕ ಮತ್ತು ಮುಂಬಯಿಯ ಹೆಸರಾಂತ ಸಮಾಜ ಸೇವಕ ಗೋಪಾಲಕೃಷ್ಣ ಗೋಖಲೆ, ಉತ್ತರ ಕನ್ನಡದ ಮಹಾ ಸಮಾಜ ಸುಧಾರಕ ಶ್ರೀಮಾನ್ ಥಕ್ಕರ್ ಭಾಷಾ ರೈಟ್ ಆನರೇಬಲ್ ಶ್ರೀನಿವಾಸ ಶಾಸ್ತ್ರಿ ಮುಂತಾದ ಸಮಾಜ ಸೇವಕರು ರಾಷ್ಟ್ರ ನಾಯಕರೂ ರಾಯರ ಮಿತ್ರರಾಗಿದ್ದರು ಮತ್ತು ಡಿ.ಸಿ.ಎಂ ಸಂಸ್ಥೆಯ ಪೋಷಕರಾಗಿದ್ದರು. ಬ್ರಹ್ಮ ಸಮಾಜಕ್ಕೆ ಸೇರಿದ ಡಾ. ಕಾರ್ನಾಡ್ಸ್ ಎನ್ನುವ ಮಹನೀಯರು ಆಗಿನ ಕಾಲಕ್ಕೆ ಬಹುದೊಡ್ಡ ಮೊತ್ತವೆನ್ನಬಹುದಾದ ಹತ್ತು ಸಾವಿರದ ರೂಪಾಯಿಗಳನ್ನಿತ್ತ ದಾನಿಯಾಗಿದ್ದರು.

ಡಿ.ಸಿ.ಎಂ. ಸಂಸ್ಥೆಯೊಂದು ಪ್ರೇಕ್ಷಣೀಯ ಕ್ಷೇತ್ರವಾಗಿತ್ತು ಎನ್ನುವುದಕ್ಕೆ ಸಂದರ್ಶಕರ ಪುಸ್ತಕದಲ್ಲಿ ದಾಖಲಾಗಿರುವ ವಿಶ್ವಕವಿ ರವೀಂದ್ರನಾಥ ಟಾಗೋರ್, ದೀನ ಬಂಧು ಸಿ.ಎಫ್ ಆ್ಯಂಡ್ರೂಸ್, ಡಾ. ಅನ್ನಿಬೆಸೆಂಟ್, ಮಹಾತ್ಮ ಗಾಂಧಿ ಅವರುಗಳ ಮೆಚ್ಚುಗೆಯ ಒಕ್ಕಣಿಕೆಯುಳ್ಳ ಬರಹಗಳು ಮತ್ತು ಅವರ ಸಹಿಗಳು ಪ್ರಮಾಣ ಪತ್ರಗಳಾಗಿವೆ. ಮಹಾತ್ಮಜಿಯವರು ಕುದ್ಮುಲ್ ರಂಗರಾಯರನ್ನು

ತಮ್ಮ ಗುರು ಎಂದು ನಮೂದಿಸಿರುವುದು ರಾಯರ ವ್ಯಕ್ತಿತ್ವದ ಅದ್ವಿತೀಯತೆಯನ್ನು ದೃಢಪಡಿಸುತ್ತದೆ.

"ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಗೆ ತಮ್ಮ ಡಿ.ಸಿ.ಎಂ. ಸಂಸ್ಥೆಯನ್ನು ವರ್ಗಾವಣೆ ಮಾಡುವುದರ ಮೂಲಕ 1927ರಲ್ಲಿ ಮಂಗಳೂರಿನಲ್ಲಿದ್ದ ಆರ್ಯ ಸಮಾಜ ಮಂದಿರದ ಸುವಿಚಾರಾನಂದ ಸ್ವಾಮೀಜಿಯವರಿಂದ ಸನ್ಯಾಸ ದೀಕ್ಷೆಯನ್ನು ಪಡೆದರು. ಸಂದರ್ಭಕ್ಕೆ ಆಗಮಿಸಿದ್ದ ಪಂಡಿತ ಧರ್ಮದೇವ ವಿದ್ಯಾವಾಚ್‌ಸ್ಪತಿಯವರು ರಾಯರನ್ನು 'ಈಶ್ವರಾನಂದ ಸನ್ಯಾಸಿ' ಎಂದು ಅಭಿನಂದಿಸಿದರು. ರಾಯರು ತಮಗೆ ಸರಕಾರವು ನೀಡಿದ್ದ "ರಾವ್ ಸಾಹೆಬ್ಬ" ಎನ್ನುವ ಬಿರುದಿನ ಪದಕವನ್ನು ಮತ್ತು ಸೇವಾ ದಾಖಲೆಯ ಪತ್ರವನ್ನು ಅಂದಿನ ಪೂಜಾ ಸಮಾರಂಭದ ಹೋಮಕುಂಡದಲ್ಲಿ ಉರಿಯುತ್ತಿದ್ದ ಅಗ್ನಿಗೆ ಸಮರ್ಪಿಸಿ ತ್ಯಾಗಕ್ಕೆ ಮಾನವೀಯತೆಗೆ ಗಗನ ಸದೃಶ್ಯರಾದರು. ರಾಯರ ಸಹಧರ್ಮಿಣಿ ರುಕ್ಮಿಣಿ ಅಮ್ಮ ರಾಯರಿಗೆ ಮೂರು ಮಂದಿ ಗಂಡು ಮಕ್ಕಳು ಮತ್ತು ಮೂರು ಮಂದಿ ಹೆಣ್ಣು ಮಕ್ಕಳು. ಹಿರಿಯ ಮಗ ದೇವರಾವ್ 1933ರಲ್ಲಿ ಪದವೀಧರರಾಗಿ, ಯಸ್. ಆರ್. ಕುದ್ಮುಲ್ ಎನ್ನುವ ಹೆಸರಿನಲಿ ಉದ್ಯೋಗ ನಿಮಿತ್ತ ಕರಾಚಿಗೆ ಹೋಗಿ ಅಲ್ಲಿಂದ ಜಪಾನಿಗೆ ತೆರಳಿ ಬಂದು ಒಂದು ವರ್ಷದಲ್ಲಿ ಮುಂಬಯಿಗೆ ಮರಳಿ ಟಾಟಾ ವಿಮಾನ ಕಂಪೆನಿಯಲ್ಲಿ ಎಕೌಂಟ್ಸ್ ಆಫೀಸರ್ ಹುದ್ದೆಯಲ್ಲಿದ್ದು 1970ರಲ್ಲಿ ನಿವೃತ್ತರಾದರು. ಉಳಿದ ಗಂಡು ಮಕ್ಕಳು ಅಮೃತರಾವ್ ಮತ್ತು ಸಂಜೀವ ರಾವ್ ಓದುವ ಸಮಯದಲ್ಲಿಯೇ ತೀರಿ ಹೋಗಿರುವರು. ಹಿರಿಯ ಮಗಳು ಲಲಿತಾಬಾಯಿ ದಿವಾನ್ ಬಹದ್ದೂರ್ ನಯಂಪಳ್ಳಿ ಸುಬ್ಬರಾಯರ ಪತ್ನಿ, ಎರಡನೆಯ ಮಗಳು ರಾಧಾ ಬಾಯಿ ಮದ್ರಾಸ್ ಸಂಸ್ಥಾನದ ಮಾಜಿ ಮಂತ್ರಿ ಡಾ. ಸುಬ್ರಾಯನ್ ಅವರ ಧರ್ಮ ಪತ್ನಿ. 1912ರಲ್ಲಿ ಚಕ್ರವರ್ತಿ ರಾಜಗೋಪಾಲಾಚಾರ್ಯರ ಪುರೋಹಿತ್ಯದಲ್ಲಿ ವಿವಾಹಿತರಾದರು. ಅದು ಅಂತರ್ಜಾತಿಯ ಸಂಬಂಧವಾಗಿತ್ತು. (ವೈದಿಕ ಸಂಪ್ರದಾಯದ ಉಲ್ಲಂಘನೆ, ಜಾತಿಯ ನೀತಿ ಬಾಹಿರ ಆಚರಣೆ, ಸಂಸ್ಕಾರ ಹೀನತೆ, ದೈವ ನಿಂದನೆ ಇನ್ನೂ ಏನೇನೋ ಆಗಿತ್ತು ಅಂದು, ಇಂದು ಆ ಭಾವನೆ ಬದಲಾಗಲಿಲ್ಲ) ಅವರ ಮಗ ಜನರಲ್ ಕುಮಾರ ಮಂಗಲಂ ಮೂರನೆಯ ಮಗಳು ಕುಮಾರಿ ಶಾಂತರಾವ್ ಲಿಬಿಯಾದಲ್ಲಿ ಸಮಾಜ ಶಿಕ್ಷಣ ಕಾಲೇಜೊಂದರಲ್ಲಿ ಲೆಕ್ಚರರ್ ಆಗಿದ್ದರು.

ಮಂಗಳೂರು ನಗರದ ಕದ್ರಿಯ ಶಿವಭಾಗ್ ಪಕ್ಕದಲ್ಲಿ ರಾಯರ ಹಿರಿಯ ಮಗಳು ಲಲಿತಮ್ಮ ತಮ್ಮ ಪತಿ ಶ್ರೀಮಾನ್ ಸುಬ್ಬರಾಯನ್ ಅವರ ಜೊತೆಯಲ್ಲಿದ್ದರು. ಸನ್ಯಾಸ ದೀಕ್ಷೆಯ ಬಳಿಕ ರಾಯರು ತಮ್ಮ ಅಂತಿಮ ದಿನಗಳನ್ನು ಅಲ್ಲಿ ಕಳೆಯುತ್ತಿದ್ದರು. ಹಾಗಿರುವಾಗ ಒಂದು ದಿನ ಮಗಳಿಗೆ ತಮ್ಮ ಕೊನೆಯ ಉಡುಗೊರೆಯೆನ್ನುವಂತೆ ಮುದ್ರೆಯೊತ್ತಿ ಭದ್ರವಾಗಿ ಮುಚ್ಚಿದ್ದ ಲಕೋಟೆಯೊಂದನ್ನಿತ್ತು ತಮ್ಮ ಉಸಿರಾಟ ನಿಂತ ದಿನವೇ ಅದನ್ನು ಒಡೆದು ನೋಡಬೇಕೆಂದು ಅಪೇಕ್ಷೆ ಪಟ್ಟರು. 1928ನೆಯ ಜನವರಿ 30 ರಂದು ಅದನ್ನು ಒಡೆಯಲೇಬೇಕಾಯ್ತು. ಆ ದಿನ ಲಲಿತಮ್ಮ ನವರ ಮನೆಯ ಮುಂದುಗಡೆಯಲ್ಲಿ ಆ ಜಾತಿ ಈ ಜಾತಿಯೆನ್ನದೆ ಸಾವಿರಾರು ಮಂದಿ ರಾಯರ ಕೊನೆಯ ದರ್ಶನಾಕಾಂಕ್ಷಿಗಳಾಗಿ ನೆರೆದರು. ರಂಗರಾಯರು ನಮ್ಮವರು ತಮ್ಮವರು ಅವರ ಪಾರ್ಥಿವ ಶರೀರದ ಸಂಸ್ಕಾರ ಕ್ರಿಯೆ ನಮಗೆ ಸೇರಿದ್ದು ತಮಗೆ ದಕ್ಕಿದ್ದು ಎನ್ನುವ ಗುಲ್ಲೆದ್ದಿತು. ರಾಯರ ಅಳಿಯ ಸುಬ್ಬರಾಯನ್ ಎಲ್ಲರಿಗೂ ಕೈಮುಗಿದು, ರಾಯರು ಮಗಳಿಗೆ ಕೊಟ್ಟಿದ್ದ ಲಕೋಟೆಯನ್ನು ಎತ್ತಿ ತೋರಿಸಿ ಅವರೆಲ್ಲರ ಸಮಕ್ಷಮವೇ ಒಡೆದು ಅದರೊಳಗಿದ್ದ ಪತ್ರವನ್ನು ಓದಿ ಹೇಳಿದರು. ಅದರಲ್ಲಿ ಅಸ್ಪೃಶ್ಯ ಪಂಗಡಗಳಲ್ಲಿ ಅತೀ ಹಿಂದುಳಿದ ಉಪ ಜಾತಿಗೆ ಸೇರಿದವರು ನನ್ನ ದಿಂಡನ್ನು ಮಣ್ಣ ಗುಂಡಿಗೆ ಸೇರಿಸಬೇಕು ಎಂದಿತ್ತು. ರಾಯರ ಕೈಂಕರ್ಯಕ್ಕೆ ವಿದೇಶಿಯರೇ

ವಿಭ್ರಮೆಗೊಂಡಿದ್ದಾಗ ತಾವು ಅವರನ್ನು ಅಂತ್ಯಜನೆಂದು ಉಪೇಕ್ಷೆ ಪಟ್ಟುದನ್ನು ಅಂತ್ಯದಲ್ಲಾದರೂ ಮರೆಮಾಚಲು ಬಂದರೆ ವೀಲು ನಾಮೆಯ ಒಕ್ಕರಣೆಕೆಯು ಸವರ್ಣೀಯರನ್ನು ತಲ್ಲಣಗೊಳಿಸಿತು. ಆ ಸಂದರ್ಭಕ್ಕೆ ನೆರೆದಿದ್ದ ಅಸ್ಪೃಶ್ಯರಲ್ಲಿ ಜಾಡಮಾಲ ಕೆಲಸಕ್ಕೆ ಒಪ್ಪಿಸಿಕೊಂಡಿದ್ದ ತೋಟಿಯೆಂದು ಕರೆಯಲ್ಪಡುವ ಆದಿ ದ್ರಾವಿಡ ಪಂಗಡದವರು ಅತೀ ಹಿಂದುಳಿದವರು ಎನ್ನುವ ತೀರ್ಮಾನವಾಗಿ ರಾಯರ ಕೊನೆಯ ಆಸೆ ಪೂರೈಕೆಗೆ ತೋಟಿಗಳು ಹೆಗಲೊಡ್ಡಬೇಕಾಯಿತು.

ಸಮಾನತೆಯೆಂದರೆ ಹೇಗೆ ಎಂಬುದನ್ನು ಜಗತ್ತಿಗೆ ಮೌನವಾಗಿ ಸಾದರ ಪಡಿಸಿದ ಕುದ್ಮುಲ್ ರಂಗರಾಯರು 'ಅಸ್ಪೃಶ್ಯ ಪಂಗಡದವರಲ್ಲಿ ಅತೀ ಹಿಂದುಳಿದ ಉಪ ಜಾತಿಯ ಎನ್ನುವಲ್ಲಿ ತಾವು ನೆಚ್ಚಿದ್ದ ತಾತ್ವಿಕತೆಯ ದೃಷ್ಟಿಕೋನವನ್ನು ಸಹಜ ಸಾಧಕನೆಂಬ ವಿನಯದಿಂದ ಮಾರ್ಮಿಕವಾಗಿ ಪ್ರಕಟಪಡಿಸಿದ್ದಾರೆ. ಶ್ರೇಣಿಕೃತ ಜಾತಿವ್ಯವಸ್ಥೆಯೇ ಅಸ್ಪೃಶ್ಯತೆಯ ಸ್ಥಿರೀಕರಣಕ್ಕೆ ಮೂಲ ಕಾರಣವೆನ್ನುವುದನ್ನು ದೃಢವಾಗಿ ನಂಬಿದರೆನ್ನುವುದು ಇಲ್ಲಿ ಸ್ಪಷ್ಟವಾಗುತ್ತದೆ. ಅಸ್ಪೃಶ್ಯತೆಯು ಮಾನಸಿಕ ಮತ್ತು ದೈಹಿಕವಾದ ದೌರ್ಜನ್ಯವಾಗಿದೆ. ಅದು ವ್ಯಕ್ತಿಯನ್ನು ಕುಗ್ಗಿಸುತ್ತದೆ ಬಗ್ಗಿಸುತ್ತದೆ. ದಮನಿಸುತ್ತದೆ. ಈ ರೀತಿ ದೃತಿಗೆಟ್ಟ ಸಮುದಾಯದಲ್ಲಿ ಮತ್ತೇ ಅದೇ ರೀತಿಯ ವಿಷ ವರ್ತುಲವಿದೆ. ಈ ಕ್ರೌರ್ಯವಿರುವಲ್ಲಿ ಸ್ವಾಭಿಮಾನ ಸಮಾನತೆ ಘನತೆಗಳಿಗೆ ಆಸ್ಪದವಿಲ್ಲ. ಜಾತಿಯು ಇವುಗಳ ಪರಿಕಲ್ಪನೆಗೇನೆ ಅವಕಾಶ ವೀಯುವುದಿಲ್ಲ. ಅದನ್ನು ಪ್ರತ್ಯೇಕ್ಷೀಕರಿಸಿಕೊಂಡಿದ್ದ ರಾಯರು ಅತಿ ಹಿಂದುಳಿದ ಉಪ ಜಾತಿ' ಎನ್ನುವಲ್ಲಿ "ಕೊರಗರು" ಎನ್ನುವ ಜಾತಿ ವಾಚಕವನ್ನು ಸಾಂಕೇತಿಸಿರುವರು. ಸನ್ನಿವೇಶವು ಸವರ್ಣಿಯರಿಗೆ ಮೊದಲೇ ಮಾನಸಿಕ ಆಘಾತವನ್ನು ಒಡ್ಡಿದ್ದರಿಂದ ಅವರು ಅಲೋಚನೆಯ ವ್ಯವಧಾನವನ್ನೇ ಕೈ ಬಿಟ್ಟರು. ಪಂಚಮರೆನಿಸಿ, ವಿವಿಧ ಜಾತಿ ಕಟ್ಟಳೆಗಳ ಸಂಕಲೆಯಲ್ಲಿ ಬಂದಿಸಲ್ಪಟ್ಟಿದ್ದ ಅಸ್ಪೃಶ್ಯರನ್ನು ಮನುಷ್ಯರ ಪಾಲಿಗೆ ಸೇರಿಸಲು ತನು ಮನ ಧನವನ್ನು ಧಾರೆಯೆರೆದ ಅಪ್ರತಿಮ ತ್ಯಾಗ ಮೂರ್ತಿ ಅಪ್ಪಟ ಮಹಾತ್ಮ ಕುದ್ಮುಲ್ ರಂಗರಾಯರು.

ಮೂಲ ನಿವಾಸಿಗಳಾದ ಕೊರಗರು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶತ–ಶತಮಾನಗಳಿಂದ ಮೂಲೆಗುಂಪಾಗಿದ್ದವರು. ಆದರೆ ಅಸ್ತಿತ್ವವೇ ಇಲ್ಲದ ಕೊರಗರ ಬದುಕಿಗೆ ಮೊದಲ ಬಾರಿಗೆ ಬೆಳಕಾದವರು ಶ್ರೀ ಕುದ್ಮಲ್ ರಂಗರಾಯರು ಅವರ ಸಮಾಜ ಪರಿವರ್ತನಾ ಕಾರ್ಯವು ಕೊರಗರಿಗೂ ತಮ್ಮ ನೆಲೆಯನ್ನು ಕಂಡುಕೊಳ್ಳಲು ಸ್ವಾತಂತ್ರ್ಯಪೂರ್ವದಲ್ಲಿಯೇ ಸಾಧ್ಯವಾಗಿತ್ತು. ಇದಕ್ಕೆ ಸಾಕ್ಷಿ ಎಂಬಂತೆ ಕೊರಗರ ಹಾಡಿಗಳಲ್ಲಿ ಇಂದು ಸಭಾ ಭವನಗಳ ಹೆಸರುಗಳನ್ನು ನಾವು ನೋಡಬಹುದು. ಪ್ರಸ್ತುತ ಆ ಸಭಾ ಭವನಗಳು ಸರ್ಕಾರವೇ ನೀಡಿದ್ದಾಗಿಯೂ ಕೊರಗರ ಘನತೆವೆತ್ತ ಬದುಕಿಗೆ ಭೂಮಿಯನ್ನು ನೀಡಿ ಅಸ್ತಿತ್ವವನ್ನು ಕೊಟ್ಟವರು ಕುದ್ಮಲ್ ರಂಗರಾಯರು. ಹಾಗಾಗಿ ಕೊರಗರ ಹಾಡಿಯಲ್ಲಿ ಇಂದಿಗೂ ರಾಯರು ಚಿರಸ್ಮರಣೀಯರು. ದಕ್ಷಿಣ ಕನ್ನಡದಲ್ಲಿ ಮೊತ್ತ ಮೊದಲ ಬಾರಿಗೆ ದಲಿತರೊಳಗೊಂಡ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದ ಕೀರ್ತಿಯೂ ಕುದ್ಮಲ್ ರಂಗರಾಯರಿಗೆ ಸಲ್ಲುತ್ತದೆ. ಅದೆಷ್ಟೊ ದಲಿತ ವಿದ್ಯಾರ್ಥಿಗಳೂ ಅವರ ಸಂಸ್ಥೆಯಲ್ಲಿ ಕಲಿತು ತಮ್ಮ ಬದುಕನ್ನು ಹಸನಗೊಳಿಸಿದ್ದಾರೆ. ಉದಾಹರಣೆಗೆ ರಾಯರ ಸಮಾಧಿಯಲ್ಲಿ ಬರೆದ ವಾಕ್ಯ ಹೇಳುವಂತೆ "ನನ್ನ ಶಾಲೆಯಲ್ಲಿ ಕಲಿತ ಒಬ್ಬ ದಲಿತ ಜನಾಂಗದ ಹುಡುಗ ಸರ್ಕಾರಿ ಕೆಲಸಕ್ಕೆ ಸೇರಿ ನಮ್ಮೂರ ರಸ್ತೆಯಲ್ಲಿ ಕಾರಿನಲ್ಲಿ ಓಡಾಡಬೇಕು. ಆಗ ಎದ್ದ ಧೂಳು ನನ್ನ ತಲೆಗೆ ತಾಗಿದರೆ ನನ್ನ ಜನ್ಮ ಸಾರ್ಥಕ" ಇದು ಬೆರಳಣಿಕೆಯಷ್ಟು. ಆದರೆ ಸ್ವಾತಂತ್ರ್ಯ ಪೂರ್ವದಲ್ಲಿಯೇ ಕುದ್ಮುಲ್ ರಾಯರು ಪರಿವರ್ತಿಸಲು ಪ್ರಾರಂಭಿಸಿದ ದೀನ ದಲಿತ ಸಮುದಾಯಗಳ ಅಸ್ತಿತ್ವ /ಭೂಮಿ ಪ್ರಶ್ನೆ ಇಂದಿಗೂ ಮರಿಚೀಕೆಯಾಗಿದೆ. ಅದರಲ್ಲಿಯೂ ದಕ್ಷಿಣ ಕನ್ನಡ

ಜಿಲ್ಲೆಯಲ್ಲಿ ಬುಡಕಟ್ಟು ಎನ್ನಿಸಿಕೊಂಡ ಕೊರಗ ಸಮುದಾಯದ ಜನಸಂಖ್ಯೆ ದಿನದಿಂದ ದಿನಕ್ಕೆ ನಶಿಸುತ್ತಿದೆ. ಅತ್ಯಂತ ಕಡಿಮೆ ಜನಸಂಖ್ಯೆ ಇರುವ ಕೊರಗ ಮತ್ತು ಮಲೆಕುಡಿಯರು ತಮ್ಮ ಇರುವಿಕೆಯನ್ನೂ ಬಲಪಡಿಸಲು ಬೀದಿ ಹೋರಾಟಕ್ಕಿಳಿಯುವ ಪರಿಸ್ಥಿತಿ ಇಂದಿಗೂ ಇದೆ. ತಮ್ಮ ಮೂಲಭೂತ ಅವಶ್ಯಕತೆಗಳಾದ ಭೂಮಿ, ಶಿಕ್ಷಣ, ಆರೋಗ್ಯ, ಉದ್ಯೋಗಕ್ಕಾಗಿ ದಿನನಿತ್ಯ ಹೋರಾಟದ ಪರಿಸ್ಥಿತಿ ಇಂದಿಗೂ ಇದೆ. ಕುದ್ಮುಲ್‌ರಂತೆ ಅದೆಷ್ಟೊ ಪ್ರಾಮಾಣಿಕ ವ್ಯಕ್ತಿಗಳು ವಾಸ್ತವಿಕ ನೆಲೆಯಲ್ಲಿ ಕೊರಗರ ಸಮಸ್ಯೆಗಳನ್ನೂ ಬಗೆಹರಿಸಬಹುದಾದ ಪ್ರಯತ್ನದಿಂದ ಇಂದು ಕುದ್ಮುಲ್‌ರ ಕನಸನ್ನು ನಿಜ ಅರ್ಥದಲ್ಲಿ ಸಾಧಿಸಿದ್ದಾರೆ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಟ್ಟ ಕಡೆಯ ಸಮುದಾಯ ಎನಿಸಿದ ಕೊರಗ ಸಮುದಾಯದ ಯುವಜನರು ಕುದ್ಮಲ್ ರಂಗರಾಯರ ವಸತಿ ಶಾಲೆಯಲ್ಲಿ ಕಲಿತು ಸರ್ಕಾರಿ ಉದ್ಯೋಗವನ್ನು ಪಡೆದು ರಾಯರ ದೂರ ದೃಷ್ಟಿತ್ವವನ್ನು ಅಕ್ಷರಶ; ಸಾಧಿಸಿದ್ದಾರೆ ಎನ್ನುವುದು ಇನ್ನೂ ವೈಶಿಷ್ಯತೆ.

**ಪರಾಮರ್ಶನ ಗ್ರಂಥಗಳು**


- ಮೈಸೂರು ವಿಶ್ವವಿದ್ಯಾನಿಲಯ–ಕನ್ನಡ ಅಧ್ಯಯನ ಸಂಸ್ಥೆ (2016). *ಕರ್ನಾಟಕದ ಸಾಮಾಜಿಕ ಚಳುವಳಿಗಳು: ಇತಿಹಾಸ ಮತ್ತು ವಿಮರ್ಶೆ.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ
- ಪ್ರಭಾಕರ ರೈ, ಕೆ. (1998). *ದಕ್ಷಿಣ ಕನ್ನಡದ ಸಮಾಜ ಸೇವಕರು.* ರಾಜತ್ ಪಬ್ಲಿಕೇಷನ್ಸ್.
- ರಂಗನಾಥ ಶೆಟ್ಟಿ, ಎಂ. (2005). *ಕುದ್ಮುಲ್ ರಂಗರಾವ್: ಸಮಾಜ ಪರಿವರ್ತಕರ ಬದುಕು ಮತ್ತು ಸಾಹಸ.* ನವಚೇತನ ಪ್ರಕಾಶನ.
- ಶಿವರಾಮು, ಕೆ. (2010). *ಕರ್ನಾಟಕದ ಸಾಮಾಜಿಕ ಹೋರಾಟಗಾರರು.* ಕನ್ನಡ ಪುಸ್ತಕ ಪ್ರಾಧಿಕಾರ.
- ವಿಜಯ ಕರ್ನಾಟಕ ಪತ್ರಿಕೆ (2020, ಮಾರ್ಚ್28). ಕುದ್ಮುಲ್ ರಂಗರಾಯರ ಸಮಾಜ ಸೇವೆಯ ಅಂಶಗಳು. ಪುಟ 7.